ಕಂದಾಯ ಇಲಾಖೆಯಲ್ಲಿ ಭೂಮಿ ಯೋಜನೆ

1798 (2404) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ಭೂಮಿ ಯೋಜನೆಯಿಂದ ರೈತರಿಗೆ ಕಂಪ್ಯೂಟರೀಕರಣದ ಮೂಲಕ ಉತಾರೆ ಪಗೈರೆಗಳನ್ನು ಪೂರೈಸಲಾಗುತ್ತದೆಯೇ;

ಆ) ಯಾವ ವರ್ಷದಿಂದ ಈ ಯೋಜನೆ ಜಾರಿಗೆ ತರಲಾಯಿತು; ರಾಜ್ಯದ ಯಾವ ಯಾವ ಕೇಂದ್ರಗಳಲ್ಲಿ ಇದನ್ನು ಪ್ರಾರಂಭಿಸಲಾಗಿದೆ.

ಇ) ಹಳ್ಳಿಯ ರೈತ ಜನರಿಗೆ ಉತಾರೆಗಳನ್ನು ನೀಡುವ ಕೇಂದ್ರ ಸಾಕಷ್ಟು ದೂರವಿರುವುದರಿಂದ ಮತ್ತು ಹೆಚ್ಚಿನ ವೆಚ್ಚದಾಯಕವಾಗಿರುವುದರಿಂದ ಸರ್ಕಾರ ಇದಕ್ಕೆ ಪರಿಹಾರ ಒದಗಿಸಲಾಗುವುದೇ;

ಈ) ಹಾಗಾದರೆ ರೈತರಿಗೆ ಅನುಕೂಲವಾಗುವಂತೆ ಉತಾರೆ ನೀಡುವ ಕೇಂದ್ರಗಳನ್ನು ಪ್ರತಿ ಹೋಬಳಿ ಪ್ರದೇಶದಲ್ಲಿ ತೆರೆಯಲಾಗುವುದೇ;

ಉ) ಹಾಗಾದರೆ ಇದಕ್ಕಾಗಿ ನಿರ್ದಿಷ್ಟ ಕಾಲ ಮಿತಿ ತಿಳಿಸಲಾಗುವುದೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಹೌದು

ಆ) ಸಕಲೇಶಪುರದಲ್ಲಿ ಮೊದಲು ಭೂಮಿ ಕಿಯಾಸ್ಕ್‌ನ್ನು ಸೆಪ್ಟೆಂಬರ್ 2000ರಲ್ಲಿ ಪ್ರಾರಂಭಿಸಲಾಯಿತು. ಈ ಕಾರ್ಯಾಚರಣೆಯು ಕರ್ನಾಟಕ ಎಲ್ಲಾ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ.

ಇ) ರೈತರು ತಾಲ್ಲೂಕು ಕಛೇರಿಗೆ ಬಂದು ಭೂ ದಾಖಲೆಗಳನ್ನು ಪಡೆಯಲು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಅದಾಗ್ಯೂ ರೈತರು ಅವರ ಗಣಕೀಕೃತ ಭೂ ದಾಖಲೆಗಳನ್ನು ವ್ಯಾಪ್ತಿಗೊಳಪಡುವ ಗ್ರಾಮಲೆಕ್ಕಾಧಿಕಾರಿಗಳನ್ನು ಕೋರಿದಲ್ಲಿ ಹೆಚ್ಚಿನ ಖರ್ಚು ಇಲ್ಲದೆ ಅವರ ಮನೆ ಬಾಗಿಲಿಗೆ ತಲುಪಿಸಲಾಗುವುದು. ಇತ್ತೀಚೆಗೆ ರಾಜ್ಯದಲ್ಲಿ ಎಲ್ಲಾ ರೈತರಿಗೆ ಒಂದು ಉಚಿತ ಗಣಕೀಕರಣದ ಪ್ರತಿಯನ್ನು ಅವರ ಮನೆ ಬಾಗಿಲಿಗೆ ಒದಗಿಸಲಾಗುತ್ತಿದೆ.

ಈ) ಸರ್ಕಾರವು ಖಾಸಗಿಯವರ ಸಹಭಾಗಿತ್ವದೊಂದಿಗೆ ಈ ಯೋಜನೆಯನ್ನು ವಿಕೇಂದ್ರಿಕರಣಗೊಳಿಸುವ ಬಗ್ಗೆ ಯೋಚಿಸಲಾಗುತ್ತಿದೆ.

ಉ) ಆದಷ್ಟು ಬೇಗನೆ ವಿಕೇಂದ್ರಿಕರಣಗೊಳಿಸಿ ಕಾರ್ಯ ವಿಧಾನವನ್ನು ರೂಪಿಸಿ ಖಾಸಗಿ ಕಿಯಾಸ್ಕ್ ಮಾಲೀಕರಿಗೆ ಸೂಚನೆ ನೀಡಿ ಅವರುಗಳ ಕಿಯಾಸ್ಕ್ ಮುಖಾಂತರ ಭೂ ದಾಖಲೆಗಳನ್ನು ರೈತರಿಗೆ ವಿತರಿಸಲಾಗುವುದು.

ಬಿಜಾಪುರ ನಗರದಲ್ಲಿನ ಐತಿಹಾಸಿಕ ಸ್ಮಾರಕಗಳು

1799 (2405) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರದಲ್ಲಿ ಐತಿಹಾಸಿಕ ಸ್ಮಾರಕಗಳು ಯಾವುವು?

ಆ) ಇದರಲ್ಲಿ ಐತಿಹಾಸಿಕ ಸ್ಮಾರಕ ತಾಜಬಾವಡಿ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಇ) ತಾಜಬಾವಡಿಯನ್ನು ಅಭಿವೃದ್ಧಿಪಡಿಸಲಾಗಿದೆಯೇ?

ಈ) ತಾಜಬಾವಡಿಯನ್ನು ಅಭಿವೃದ್ಧಿ ಪಡಿಸಿರುವುದರ ಉದ್ದೇಶಗಳೇನು?

ಉ) ಅಭಿವೃದ್ಧಿಪಡಿಸುವ ಕೆಲಸವನ್ನು ಯಾರಿಗೆ ಒಪ್ಪಿಸಲಾಗಿದೆ?

ಊ) ಇದಕ್ಕಾಗಿ ಸರ್ಕಾರ ನೀಡಿರುವ ಅನುದಾನ ಎಷ್ಟು; ಅಭಿವೃದ್ಧಿ ಕೆಲಸವನ್ನು ಯಾವಾಗ ಮುಕ್ತಾಯಗೊಳಿಸಲಾಗಿದೆ?

ಶ್ರೀ ಡಿ.ಬಿ ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು)

ಅ) ಗೋಲ್‌ಗುಮ್ಮಟ, ಇಬ್ರಾಹಿಂ ರೋಜಾ ಜಾಮಿಯಾ ಮಸೀದಿ, ಮಲಿಕ್ ಇ ಮೈದಾನ ತೋಪು, ಬಾರಾಕಮಾನ್, ಆನಂದ ಮಹಲ್, ಗಗನಮಹಲ್, ತಾಜ್ ಬಾವಡಿ, ಚಂದಾಬಾವಡಿ, ಮೆಹತ್ತರ್ ಮಹಲ್, ಜೋಡ್ ಗುಂಬಜ್,

ಆ) ಹೌದು

ಇ) ತಾಜ್ ಬಾವಡಿಯನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ಪ್ರವಾಸಿಗರನ್ನು ಆಕರ್ಷಿಸುವುದೇ ಇದರ ಉದ್ದೇಶವಾಗಿದೆ.

ಉ) ಅಭಿವೃದ್ಧಿಪಡಿಸುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ, ಇವರಿಗೆ ವಹಿಸಲಾಗಿದೆ.

ಊ) ರೂ. 10.00 ಲಕ್ಷಗಳು

ಶೀಘ್ರವಾಗಿ ಮುಕ್ತಾಯಗೊಳಿಸಲಾಗುವುದು

ಬಿಜಾಪುರ ಉಪವಿಭಾಗದಲ್ಲಿ ರಸ್ತೆಗಳ ದುರಸ್ತಿ

1800 (2406) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಲೋಕೋಪಯೋಗಿ ಉಪವಿಭಾಗದ ನಿರ್ವಹಣೆಯಲ್ಲಿ ಇರತಕ್ಕಂತಹ ರಸ್ತೆಗಳ ಸಂಖ್ಯೆ ಎಷ್ಟು;

ಆ) 1999 ರಿಂದ 2003ರವರೆಗೆ ರಸ್ತೆಗಳು ದುರಸ್ತಿಗೊಳಿಸುವುದಕ್ಕಾಗಿ ಸರ್ಕಾರದಿಂದ ವರ್ಷವಾರು ನೀಡಲಾದ ಅನುದಾನ ಎಷ್ಟು;

ಇ) ಅನುದಾನ ಬಳಸಿಕೊಂಡು ಇಲಾಖೆಯವರು ಯಾವ ಯಾವ ರಸ್ತೆಗಳನ್ನು ದುರಸ್ತಿಗೊಳಿಸಿರುತ್ತಾರೆ;

ಈ) ವರ್ಷವಾರು ಪ್ರತಿಯೊಂದು ದುರಸ್ತಿಗಾಗಿ ಮಾಡಲಾಗಿರುವ ವೆಚ್ಚ ಎಷ್ಟು;

ಉ) ರಸ್ತೆಗಳ ಸಂಪೂರ್ಣ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದೆಯೆ; ಪೂರ್ಣವಾಗಿ ರಸ್ತೆಗಳನ್ನು ದುರಸ್ತಿಗೊಳಿಸದೇ ಇದ್ದಲ್ಲಿ, ಯಾವ ಕಾಲ ಮಿತಿಗೊಳಪಡಿಸಿ ರಸ್ತೆಗಳನ್ನು ದುರಸ್ತಿಗೊಳಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಲೋಕೋಪಯೋಗಿ ಇಲಾಖೆ ವಿಜಾಪುರ ಉಪವಿಭಾಗದಲ್ಲಿ ನಿರ್ವಹಣೆ ಅಡಿಯಲ್ಲಿ 4 ರಾಜ್ಯ ಹೆದ್ದಾರಿಗಳಿದ್ದು ಇವುಗಳ ಒಟ್ಟು ಉದ್ದಳತೆ 133.10 ಕಿಮೀ ಇರುತ್ತದೆ. ಅದರಂತೆ 19